## ಪಶ್ಚಿಮ ಘಟ್ಟ ಉಳಿಸಿ ಅಭಿಯಾನ

ಪತ್ರಿಕಾ ಪ್ರಕಟಣೆ

# ಪಶ್ಚಿಮ ಘಟ್ಟ ಪ್ರಾಧಿಕಾರ ರಚನೆಗೆ ಸ್ವಾಗತ

ಕಳೆದ ತಿಂಗಳು (ಫೆಬ್ರವರಿ ೧೮-೨೦, ೨೦೧೦) ಊಟಿಯಲ್ಲಿ ಪಶ್ಚಿಮ ಘಟ್ಟ ಉಳಿಸಿ ಅಭಿಯಾನದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕೇಂದ್ರ ಪರಿಸರ ಸಚಿವ ಜೈರಾಮ ರಮೇಶ ಎರಡು ಆಶ್ವಾಸನೆಯನ್ನು ನೀಡಿದ್ದರು. ಪಶ್ಚಿಮ ಘಟ್ಟಗಳ ರಕ್ಷಣೆಗಾಗಿ ಜೀವಸಂಕುಲ ಪ್ರಾಧಿಕಾರದ ರಚನೆ ಹಾಗೂ ಸಂಸತ್ತಿನಲ್ಲಿ ಪಶ್ಚಿಮ ಘಟ್ಟ ಪ್ರದೇಶದಿಂದ ಆರಿಸಿ ಬಂದ ಸಂಸತ್ ಸದಸ್ಯರ ವೇದಿಕೆಯನ್ನು ರಚಿಸುವದು.

ಕೇವಲ ೧೫ ದಿನಗಳಲ್ಲಿ ಈ ಎರಡೂ ಆಶ್ವಾಸನೆಯನ್ನು ಸಚಿವರು ಈಡೇರಿಸಿದ್ದಾರೆ. ದಿಲ್ಲಿಯಲ್ಲಿ ದಿನಾಂಕ ೪, ಮಾರ್ಚ ೨೦೧೦ ರಂದು ನಡೆದ ಪಶ್ಚಿಮ ಘಟ್ಟ ಪ್ರದೇಶದಿಂದ ಆರಿಸಿ ಬಂದ ಸಂಸತ್ ಸದಸ್ಯರ ಸಭೆಯಲ್ಲಿ ಪಶ್ಚಿಮ ಘಟ್ಟ ಪ್ರಾಧಿಕಾರದ ರಚನೆಯನ್ನು ಘೋಷಿಸಿದರು. ಈ ಪ್ರಾಧಿಕಾರವು ಪಶ್ಚಿಮ ಘಟ್ಟದ ಸೂಕ್ಷ್ಮ ಪರಿಸರದ ಕುರಿತು ಅಧ್ಯಯನ ಮಾಡಿ ವರದಿ ನೀಡಲಿದೆ. ಖ್ಯಾತ ಪರಿಸರ ವಿಜ್ಞಾನಿ ಮಾಧವ ಗಾಡಗೀಳರು ಇದರ ಅಧ್ಯಕ್ಷರಾಗಿದ್ದಾರೆ. ಹದಿನೈದು ಜನರ ಸಮಿತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಸರ ವಿಜ್ಞಾನಿಗಳು, ಸರಕಾರದ ಇಲಾಖೆಯ ಕಾರ್ಯದರ್ಶಿಗಳು ಇದ್ದಾರೆ.

ಈ ಸಮಿತಿ ಸಹ್ಯಾದ್ರಿಯ ಸಮಗ್ರತೆಯನ್ನು ಗಣನೆಗೆ ತೆಗೆದುಕೊಂಡು ಮುಂಬರುವ ದಿನಗಳಲ್ಲಿ ಈ ಕ್ಷೇತ್ರದಲ್ಲಿ ನಡೆಯಬೇಕಾಗಿರುವ ಕ್ರಮಗಳ ಬಗ್ಗೆ ನಿಖರವಾದ ನೀತಿ ನಿರ್ದೇಶನಗಳನ್ನು ನೀಡಲಿದೆ. ಇದರಲ್ಲಿ ಜನ ಪರ ಸಂಘಟನೆಗಳ, ಸಾಮಾನ್ಯ ಜನರ ಆಶೋತ್ತರಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಅಭಿಯಾನದ ಕೋರಿಕೆ.

ಪರಿಸರ ಸಚಿವರಾದ ಜೈರಾಮ ರಮೇಶ ಈ ಐತಿಹಾಸಿಕ ನಿರ್ಣಯ ತೆಗೆದುಕೊಂಡು ತಾವು ನುಡಿದಂತೆ ನಡೆದು ತೋರಿಸಿದ್ದಕ್ಕಾಗಿ ಪಶ್ಚಿಮ ಘಟ್ಟ ಉಳಿಸಿ ಅಭಿಯಾನವು ಅವರನ್ನು ಅಭಿನಂದಿಸುತ್ತದೆ.

ದಿನಾಂಕ: ೫/೨/೨೦೧೦

ಜಿ.ಎಲ್. ಜನಾರ್ಧನ್, ರಾಜ್ಯ ಸಂಯೋಜಕರು
ಪಶ್ಚಿಮ ಘಟ್ಟ ಉಳಿಸಿ ಅಭಿಯಾನ, ಶಿವಮೊಗ್ಗ
ಕರ್ನಾಟಕ

ಪಾಂಡುರಂಗ ಹೆಗಡೆ, ಸಂಯೋಜಕರು
ಪಶ್ಚಿಮ ಘಟ್ಟ ಅಭಿಯಾನ

# ಪಶ್ಚಿಮ ಘಟ್ಟ ಉಳಿಸಿ ಅಭಿಯಾನ

ಜನವರಿ ೨೮, ೨೯, ೩೦, ೨೦೧೧, ಮೂಡುಬಿದಿರೆ

**ಸಹ್ಯಾದ್ರಿ ಉತ್ಸವ**

ಮಾನ್ಯರೇ,

ಪಶ್ಚಿಮ ಘಟ್ಟ ಪ್ರದೇಶದಲ್ಲಿ ಬರುವ ರಾಜ್ಯಗಳ ಪ್ರತಿನಿಧಿಗಳೊಂದಿಗೆ ಮೂರು ದಿನದ ವಿಶಿಷ್ಟವಾದ ಸಹ್ಯಾದ್ರಿ ಉತ್ಸವವನ್ನು ಏರ್ಪಡಿಸಲಾಗಿದೆ.

**ಈ ಉತ್ಸವ ಯಾಕೆ? ಇದರ ಉದ್ದೇಶ ಏನು?**

- ಸಹ್ಯಾದ್ರಿಯ ಬಗ್ಗೆ ರಾಜ್ಯ ಹಾಗೂ ದೇಶದ ಗಮನ ಸೆಳೆಯಲು ಈ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಎಲ್ಲ ಕಾರ್ಯಕರ್ತರ, ಸಂಶೋಧಕರ, ಜನಪ್ರತಿನಿಧಿಗಳ ವಿಚಾರಗಳನ್ನು ಹಂಚಿಕೊಳ್ಳುವದು.
- ಪಶ್ಚಿಮ ಘಟ್ಟಗಳ ಸಮಗ್ರ ರಕ್ಷಣೆಗಾಗಿ ರಾಷ್ಟ್ರೀಯ ನೀತಿ ನಿರೂಪಣೆಗಾಗಿ ಪ್ರಯತ್ನಿಸುವದು.

**ಯಾರು ಭಾಗವಹಿಸುತ್ತಾರೆ?**

- ಪಶ್ಚಿಮ ಘಟ್ಟದಲ್ಲಿ ಕಾರ್ಯನಿರತರಾಗಿರುವ ಕಾರ್ಯಕರ್ತರು, ಪರಿಸರ ತಜ್ಞರು, ಕೃಷಿಕರು, ವಿದ್ಯಾರ್ಥಿಗಳು, ಪ್ರವಾಸೋದ್ಯಮಿಗಳು, ಜನಸಾಮಾನ್ಯರು ಹಾಗೂ ಮಾಧ್ಯಮದ ಪ್ರತಿನಿಧಿಗಳು.
- ನೀತಿ ನಿರ್ಣಾಯಕರು, ರಾಜಕಾರಣಿಗಳು, ಅಧಿಕಾರಿಗಳು
- ಸಾಂಸ್ಕೃತಿಕ ಪ್ರತಿನಿಧಿಗಳು.

**ಎಲ್ಲಿ, ಯಾವಾಗ?**

**ಸ್ಥಳ: ಡಾ॥ ಆಳ್ವಾರ ಆರೋಗ್ಯ ಧಾಮ, ಮಿಜಾರು**
**ಮೂಡುಬಿದಿರೆ, ದಕ್ಷಿಣ ಕನ್ನಡ**

**ದಿನಾಂಕ: ಜನವರಿ ೨೮, ೨೯ ಹಾಗೂ ೩೦, ೨೦೧೧**

ಕಾರ್ಯಕ್ರಮದ ವಿವರ:
೨೮/೧/೨೦೧೧ : ಉದ್ಘಾಟನೆ
: ಯುವಕರ ಜೊತೆ ಚರ್ಚೆ
೨೯/೧/೨೦೧೧ : ಕುದುರೆ ಮುಖ, ತುಂಗಾಮೂಲಕ್ಕೆ ಪ್ರವಾಸ
೩೦/೧/೨೦೧೧ : ಜನಪ್ರತಿನಿಧಿಗಳೊಂದಿಗೆ ಸಂವಾದ
ಸುಂದರಲಾಲ ಬಹುಗುಣ/ ಮೇಧಾ ಪಾಟ್ಕರ್ ಅವರಿಂದ ಸಮಾರೋಪ

ವಿಶಿಷ್ಟವಾದ ಈ ಸಹ್ಯಾದ್ರಿ ಉತ್ಸವದಲ್ಲಿ ನೀವು ಭಾಗವಹಿಸಬೇಕೆಂದು ನಮ್ಮ ಕೋರಿಕೆ. ನಿಮ್ಮ ಪ್ರವಾಸದ ವೆಚ್ಚವನ್ನು (ಬಸ್/ರೈಲು ಟಿಕೆಟ್ ನೀಡಿದರೆ) ಭರಿಸಲಾಗುವದು.

ನೀವು ಬರುವ ದಿನಾಂಕ/ಸಮಯವನ್ನು ಈ ಕೆಳಗಿನ ವಿಳಾಸಕ್ಕೆ ಮುಂಚಿತವಾಗಿ ತಿಳಿಸಿದಲ್ಲಿ ನಿಮ್ಮ ಉಳಿಯುವ ಹಾಗೂ ಊಟ/ ತಿಂಡಿಯ ವ್ಯವಸ್ಥೆ ಮಾಡಲು ಅನುಕೂಲವಾಗುವದು.

ನಿಮ್ಮನ್ನು ಭೇಟಿಯಾಗುವ ನಿರೀಕ್ಷೆಯಲ್ಲಿ: ಸಂಪರ್ಕ ವಿಳಾಸ

ಶ್ರೀ. ಅಶೋಕ ಕುಂದಾಪುರ
ಸಂಘಟನಾ ಕಾರ್ಯದರ್ಶಿ
ಉಡುಪಿ ಜಿಲ್ಲಾ ಪರಿಸರಾಸಕ್ತರ ಒಕ್ಕೂಟ
ಕಲಾಶ್ರೀ, ಹಯಗ್ರೀವ ನಗರ
ಉಡುಪಿ – 576 102
ಮೊಬೈಲ್:9880305526
arkundapur@yahoo.com

ಶ್ರೀ ಪಾಂಡುರಂಗ ಹೆಗಡೆ
ಸಂಯೋಜಕರು
ಪಶ್ಚಿಮ ಘಟ್ಟ ಉಳಿಸಿ ಅಭಿಯಾನ
ಶಿರಸಿ.

[Sah.Day Rep 2014]

379.

# Sahyadri Day 2014

In order to create awareness about Western Ghats every year we celebrate SAHYADRI DAY. This year we organised programmes in Bangalore and Bellary.

In Bangalore, MINCHO, a team of women groups held background meeting with high school students in Basaveshwar Nagar. As follow up to this meeting, Pandurang hedge attended a meeting on 6th September 2014 and a grand function was organised. The MINCHU team explained about the Western Ghats and why 'Sahyadri Day' was being celebrated.

Thereafter Pandurang Hegde shared his views and experiences with students and staff. There were interesting questions from students as how they contribute to saving Western Ghats. This programme was able to create awareness among 300 students in this school. Thanks to MINCHU team, that organised this event and prepared for the success.

Sahyadri Day at Bellary:

The Krishna Deva Raya University at Bellary organised a grand programme on the occasion of Sahyadri Day on 8th September 2014. It was inaugurated by the Pro Vice Chandlor and Register of University. Laxman Singh, Water Expert from Rajasthan was the Chief Guest. After the inauguration following resource persons addressed the students and teachers of National Service Scheme Unit.

Devraj Reddy

The need for water saving in the plain regions of Deccan plateau. He spoke about reckless digging of bore wells and how it is destroying the water sources. He explained with practical information how to recharge failed bore wells. This presentation with slide showed how to respect water and not to waste water.

The second presentation was by Prof. Narayana swami from Kolar. He linked the relationship between Western Ghats and the dry regions. He called to protect the biodiversity of Sahyadri.

The third presentation was on Talparake, a traditional water storage method practiced in Tumkur district. Mallikarjun Hospalya shoed the importance of Talparke and how this is the basis for sustainable water management in dry regions. After these presentations the students and teachers asked questions about Western Ghats and how they can contribute to save these Sahyadri.

The programme was attended by about 350 students and teachers of NSS programme. They assured to take the mission of save Sahyadri through NSS programmes in their respective colleges.

This was sponsored by Sri Krishna Devaraya University, Sahyadri Research Center, Shivmogga and Prakruti, SIRSI.

**ಪತ್ರಿಕಾ ಪ್ರಕಟಣೆ**

# ಪ್ರಾಣವಿಲ್ಲದ ಚುನಾವಣಾ ಪ್ರಣಾಳಿಕೆಗಳು

ದೇಶದ ಎಂಟನೆಯ ದೊಡ್ಡ ರಾಜ್ಯವಾದ ಕರ್ನಾಟಕವು ತನ್ನ ಸಂಸ್ಕೃತಿ, ವಿವಿಧತೆ ಹಾಗೂ ನೈಸರ್ಗಿಕ ಸಂಪತ್ತಿಗೆ ಹೆಸರುವಾಸಿಯಾಗಿತ್ತು. ಆದರೆ ಕಳೆದ ಐದು ವರ್ಷಗಳಲ್ಲಿ ಅದು ಅಕ್ರಮ ಗಣಿಗಾರಿಕೆ ಹಾಗೂ ಭೂಮಾಫಿಯಾದಿಂದ ಕೋಟ್ಯಂತರ ರೂಪಾಯಿಗಳ ಹಗರಣಗಳ ಖ್ಯಾತಿ ಪಡೆದಿದೆ. ಐಟಿ ಹಾಗೂ ಬಿಟಿ ತಂತ್ರಜ್ಞಾನದ ಥಳಕು ಬೆಂಗಳೂರು ಶಹರವನ್ನು ದಾಟಿ ಗ್ರಾಮೀಣ ಪ್ರದೇಶವನ್ನು ತಲುಪಿಲ್ಲ.

ಜಾಗತಿಕ ಮಟ್ಟದಲ್ಲಿ ಹೆಸರುವಾಸಿಯಾಗಿರುವ ಪಶ್ಚಿಮ ಘಟ್ಟಗಳನ್ನು ವಿಶ್ವ ಪರಂಪರಾ ತಾಣಗಳಾಗಿ ಘೋಷಿಸುವುದನ್ನು ಸದನದಲ್ಲೇ ಸರ್ವಸಮ್ಮತಿಯಿಂದ ತಿರಸ್ಕರಿಸಿದ ಖ್ಯಾತಿಯೂ ನಮ್ಮ ಶಾಸಕರದ್ದಾಗಿದೆ. ಮಲೆನಾಡನ್ನು ಸಂರಕ್ಷಿಸಲು ರಾಜ್ಯ ಸರಕಾರ ಡಾ. ಮಾಧವ ಗಾಡಗೀಳ ವರದಿಯನ್ನು ತಿರಸ್ಕರಿಸಿದೆ.

ಚುನಾವಣಾ ಕಣದಲ್ಲಿರುವ ಪಕ್ಷಗಳಲ್ಲಿನ ಪ್ರಣಾಳಿಕೆಗಳನ್ನು ನೋಡಿದಾಗ ಕಂಡು ಬರುವ ಅಂಶಗಳು:

- ರಾಜ್ಯದಲ್ಲಿ ಬರಲಿರುವ ಸರಕಾರ ನೀರಿನ ಸುರಕ್ಷತೆಯನ್ನು ಕಾಪಾಡೀತೆ?
- ಶಾಸಕರು ಪಕ್ಷಬೇಧ ಮರೆತು ನೀರನ್ನು, ಮಳೆಯನ್ನು ತಡೆಯಬಲ್ಲ ಮಲೆನಾಡನ್ನು ನಾಶಪಡಿಸುವದಿಲ್ಲ ಎಂಬ ಆಶ್ವಾಸನೆಯನ್ನು ನೀಡುವರೆ?
- ಆರ್ಥಿಕ ಅಭಿವೃದ್ಧಿಯು ನೀರು, ಗಾಳಿ ಹಾಗೂ ಮಣ್ಣನ್ನು ಕಲುಷಿತಗೊಳಿಸದಂತೆ ತಡೆಯಲು ಯಾವ ಕ್ರಮ ಕೈಗೊಳ್ಳುವಿರಿ?
- ಕೃಷಿ ಕ್ಷೇತ್ರವನ್ನು ತಲ್ಲಣಗೊಳಿಸಿರುವ ಕುಲಾಂತರಿ ತಂತ್ರಜ್ಞಾನವನ್ನು ನಿಷೇಧಿಸುವ ಧೈರ್ಯ ತೋರುವಿರೆ?

ಈ ಮೇಲಿನ ಅಂಶಗಳನ್ನು ಅಳವಡಿಸಿಕೊಳ್ಳದ ಪ್ರಣಾಳಿಕೆಗಳು ಪ್ರಾಣ ಇಲ್ಲದ ಪೊಳ್ಳು ಭರವಸೆಯಾಗಲಿದೆ.

ಪ್ರಮುಖ ಪಕ್ಷಗಳ ಪ್ರಣಾಳಿಕೆಗಳು, ಅದರಿಂದುಟಾಗುವ ಅಪಾಯದ ವಿಶ್ಲೇಷಣೆ ಈ ಕೆಳಗಿನಂತಿದೆ.

ಪತ್ರಿಕಾ ಪ್ರಕಟಣೆ
ದಿ: 3/5/2013

ಪಶ್ಚಿಮ ಘಟ್ಟ ಉಳಿಸಿ ಅಭಿಯಾನ
ಕರ್ನಾಟಕ

# ಪ್ರಾಣವಿಲ್ಲದ ಪ್ರಣಾಳಿಕೆಗಳು

| ಪಕ್ಷ | ಪ್ರಣಾಳಿಕೆಯ ಮುಖ್ಯ ಅಂಶಗಳು | ಅಪಾಯ |
|---|---|---|
| ಕಾಂಗ್ರೆಸ್ | • ಸ್ವಚ್ಛ ಆಡಳಿತ.<br>• ಸಮರ್ಥ ನಾಯಕತ್ವ.<br>• ಅಕ್ಕಿ ಬಿಪಿಎಲ್ ಕಾರ್ಡಗೆ ರೂ.1 ರಂತೆ.<br>• ಹಾಲು ಪ್ರತಿ ಲೀಟರ್ ರೂ.4 ಸಬ್ಸಿಡಿ.<br>• 2 ಲಕ್ಷ ಸಾಲ–ಬಡ್ಡಿ ವಿನಾಯಿತಿ.<br>• ಕಾವೇರಿ/ಕೃಷ್ಣಾ ನೀರಿನ ಯೋಜನೆಗಳು ಜಾರಿ.<br>• ಬೀದರ್–ಚಾಮರಾಜನಗರ ಅಷ್ಟಪಥ ರಸ್ತೆ ಕೈಗಾರಿಕಾ ಕಾರಿಡಾರ್ ನಿರ್ಮಾಣ.<br>• ರಾಜ್ಯವನ್ನು ರಕ್ಷಿಸುವುದು?<br>• ಸರ್ವರಿಗೂ ಸಮಪಾಲು/ಸಮಬಾಳು? | • 40 ವರ್ಷಗಳ ಕೆಟ್ಟ ಆಡಳಿತದ ಇತಿಹಾಸ.ಇದರ ಪುನರಾವರ್ತನೆ.<br>• ದೂರದೃಷ್ಟಿ ಇಲ್ಲದ ನೇತಾರರು, ಕಚ್ಚಾಟ, ಸ್ವಾರ್ಥ, ಜನವಿರೋಧಿ, ಪರಿಸರ ವಿರೋಧಿ.<br>• ಭತ್ತ ಬೆಳೆಯುವ ರೈತನ ಪಾಡೇನು?<br>• ಸಬ್ಸಿಡಿಗಿಂತ ಮೇವು ಹಿಂಡಿ ನೀಡಬಲ್ಲರೇ?<br>• ಸಾಲ ಒಂದರಿಂದ ಕೃಷಿ ನಡೆಯದು.<br>• ಕಾವೇರಿಯಲ್ಲಿ ನೀರಿಲ್ಲದಿರುವಾಗ ಈ ಯೋಜನೆಗಳಿಂದ ಪ್ರಯೋಜನವೇನು?<br>• ಇಡೀ ಕರ್ನಾಟಕವನ್ನೇ ಧ್ವಂಸಗೊಳಿಸಲಿರುವ ರಿಯಲ್ ಎಸ್ಟೇಟ್ ಯೋಜನೆ ಇದಾಗಿದೆ! NICE ದಿಂದ ಪಾಠ ಕಲಿಯದೇ ಇರುವುದು ಖೇದಕರ.<br>• 40 ವರ್ಷದ ಸಾಧನೆ ನಮ್ಮೆದುರಿಗಿದೆ! ರಾಜ್ಯವನ್ನು ಭಕ್ಷಿಸುವುದೇ ಧರ್ಮ.<br>• ಈ ಘೋಷಣೆಯನ್ನು ಮಂತ್ರಿ–ಶಾಸಕರಿಗೆ ಆಸ್ತಿ–ಹಣದಲ್ಲಿ ಹೆಚ್ಚಿನ ಪಾಲು, ಜನರಿಗೆ ಬಡತನ ಎಂದು ಬದಲಾಯಿಸುವುದು ಉತ್ತಮ. |
| ಬಿ.ಜೆ.ಪಿ | • ಅಕ್ಕಿ ರೂ.2/ ಕೆಜಿ ಬಿಪಿಎಲ್ ಕಾರ್ಡನವರಿಗೆ.<br>• ಸೈಬರ್ ಕೆಫೆ–ಪ್ರತಿ ಹಳ್ಳಿಯಲ್ಲಿ! | • ಅಕ್ಕಿ ಬೆಳೆಯುವ ರೈತ ಏನು ಮಾಡಬೇಕು? ಅವನಿಗೆ ತಗಲುವ ವೆಚ್ಚ ರೂ.30/ಕೆಜಿಗೆ ಯಾರು ಕೊಡುತ್ತಾರೆ?<br>• ಹಳ್ಳಿಯಿಂದ ವಲಸೆ, ಕೃಷಿಕನ ದುಸ್ಥಿತಿಯನ್ನು ಮುಂಚೆ ತಡೆಯಲಿ. |
| | • ಪುಕ್ಕಟೆ ವಿದ್ಯುತ್ ರೈತರಿಗಾಗಿ ಹತ್ತು HPವರೆಗೆ.<br>• ರೂ 500 ಕೋಟಿ ಬೆಂಬಲ ಬೆಲೆಗಾಗಿ<br>• ಸಬ್ಸಿಡಿ ಡೈರಿ ರೈತರಿಗೆ ಸಬ್ಸಿಡಿ ರೂ.2/ಲೀ ಹಾಲಿಗೆ | • ವಿದ್ಯುತ್ ಇಲ್ಲದಿರುವಾಗ ಪಂಪ್ಸೆಟ್ ಯಾಕೆ?<br>• ಯಾತಕ್ಕೂ ಸಾಲದು.<br>• ಪ್ರತಿ ಲೀಟರ್ ಹಾಲಿಗೆ ಖರ್ಚು 25ರೂ. ಆಗಿರುವಾಗ ರೂ.2 ರಿಂದ ಏನು ಪ್ರಯೋಜನ. |

| | | |
|---|---|---|
| | • ರೇಷ್ಮೆಗೆ ಬೆಂಬಲ ಬೆಲೆ<br>• ಕೃಷಿಭೂಮಿ ಮಾರಾಟ ಹಾಗೂ ಪರಭಾರೆ ಮಾಡಲು ಅಡೆತಡೆಗಳಿಲ್ಲ.<br>• ಎಲ್ಲರಿಗೂ ಆರೋಗ್ಯ ಕವಚ<br>• ಐಟಿ/ಬಿಟಿಗೆ ಪ್ರೋತ್ಸಾಹ.<br>• ಸ್ವಚ್ಛ ಕುಡಿಯುವ ನೀರಿನ ಪೂರೈಕೆ ಹಳ್ಳಿ-ಪಟ್ಟಣಗಳಿಗೆ.<br>• ಬೆಂಗಳೂರನ್ನು ಜಾಗತಿಕ ಶಹರ ಮಾಡುತ್ತೇವೆ! ಪರಿಸರ ರಕ್ಷಣೆಗೆ ಹಸಿರು ಕವಚ, ಮಾಲಿನ್ಯ ನಿಯಂತ್ರಣ.<br>• ಭ್ರಷ್ಟಾಚಾರ ರಹಿತ ಆಡಳಿತ.<br>• ಲೋಕಾಯುಕ್ತಕ್ಕೆ ಶಕ್ತಿ. | • ರಾಜ್ಯದ ರೇಷ್ಮೆ ಬೆಳೆಯ ಸರ್ವನಾಶ/ಅಂತರಾಷ್ಟ್ರೀಯ ಒಪ್ಪಂದದಿಂದ.<br>• ರಿಯಲ್ ಎಸ್ಟೇಟ್ ಲಾಬಿಗೆ ಸಹಾಯ.<br>• ಆರೋಗ್ಯ ಕ್ಷೀಣಿಸಿದೆ/ಶುದ್ಧವಾದ ನೀರಿಲ್ಲ.<br>• ಜನರನ್ನು ದೋಚಿ ಐಟಿ/ಬಿಟಿಗೆ ಸಹಾಯ.<br>• ನೀರೇ ಇಲ್ಲದಿರುವಾಗ ಎಲ್ಲಿಂದ ತರುವಿರಿ?<br>• ಬೆಂಗಳೂರು ಜಗತ್ತಿನ ಅತ್ಯಂತ ಕೊಳಚೆ ನಗರಗಳ ಸಾಲಿನಲ್ಲಿ ಹೆಸರುವಾಸಿ! ಇದು ಮುಂದುವರಿಯಲಿದೆ.<br>• ಕಳೆದ 5 ವರ್ಷಗಳಲ್ಲಿ ಮಿತಿಮೀರಿದ ಭ್ರಷ್ಟಾಚಾರದ ದಾಖಲೆ.<br>• ಲೋಕಾಯುಕ್ತ ಸಂಸ್ಥೆಯನ್ನೇ ದುರ್ಬಲಗೊಳಿಸಿದ ಇತಿಹಾಸ ಈ ಪಕ್ಷದ್ದಾಗಿದೆ. |
| **ಜೆಡಿಎಸ್** | • ಜನಪರ ನಾಯಕತ್ವ, ಪಾರದರ್ಶಕ ಆಡಳಿತ.<br>• ಲೋಕಾಯುಕ್ತರ ಬಲ ವೃದ್ಧಿಸುವುದು.<br>• ರೈತ ಕುಟುಂಬದ ಮಹಿಳೆಗೆ ರೂ.500 ಕಚ್ಚಾ ವಸ್ತು ಖರೀದಿಸಲು!<br>• ಸಾಲ ಮನ್ನಾ ಜಾರಿ.<br>• ಧವಸಧಾನ್ಯಗಳಿಗೆ ರೂ 150-500 ಸಹಾಯಾರ್ಥ.<br>• ಬಿತ್ತನೆ ಬೀಜಕ್ಕೆ ಶೇ.75 ಸಬ್ಸಿಡಿ.<br>• ಹನಿ ನೀರಾವರಿಗೆ ಶೇ.90 ಸಬ್ಸಿಡಿ. | • ಹಿಂದಿನ ಅನುಭವ ಪಿತೂರಿಕೋರ, ದಗಲಬಾಜಿ ಸರಕಾರ.<br>• ಬಲ ಕ್ಷೀಣಿಸುವ ನಿರ್ಣಯ ತೆಗೆದುಕೊಂಡಿದೆ.<br>• ರೈತರಿಗೆ ಆಸೆ ತೋರಿಸಿ ಅವರನ್ನು ಭ್ರಷ್ಟಗೊಳಿಸುವುದು.<br>• ಇಲ್ಲಿಯವರೆಗೆ ಆಗಿರುವ ಸಾಲಮನ್ನಾದಿಂದ ಸಹಾಯವಾಗಿಲ್ಲ.<br>• ಎತಕ್ಕೂ ಸಾಲದು.<br>• ಬೀಜ ಕಂಪನಿಗಳಿಗೆ ಲಾಭ ಆಗಲಿದೆ.<br>• ನೀರಾವರಿ ಕಂಪನಿಗಳಿಗೆ ಹೆಚ್ಚಿನ ಲಾಭ. |

## ಸಹ್ಯಾದ್ರಿ ದಿನಾಚರಣೆ

ದಕ್ಷಿಣಭಾರತದಲ್ಲಿರುವ ಸಹ್ಯಾದ್ರಿ ಪರ್ವತ ಪುರಾತನ ಕಾಲದಿಂದ ಅತ್ಯಂತ ಸೂಕ್ಷ್ಮ ಪ್ರದೇಶಗಳಲ್ಲಿ ಒಂದಾಗಿದೆ. 'ಸಹ್ಯಾದ್ರಿ' ಎಂಬುದು ಈ ಪರ್ವತಗಳಿಗೆ ಪುರಾತನ ಕಾಲದಿಂದ ಬಂದ ಹೆಸರು. ಬ್ರಿಟಿಷ್ ಆಡಳಿತದಲ್ಲಿ 'ಸಹ್ಯಾದ್ರಿ' ಎಂಬ ಪದವನ್ನು ಉಚ್ಚರಿಸಲು ಸಾಧ್ಯವಾಗದಿರುವದರಿಂದ ಅವರು ಇದಕ್ಕೆ 'ಪಶ್ಚಿಮ ಘಟ್ಟ' ಎಂದು ಕರೆದರು. ಈ ಪರ್ವತಗಳು ಇಂದು ಬರಡಾಗುತ್ತಿರುವದಲ್ಲದೆ, ಅವುಗಳು ವಿನಾಶದ ಅಂಚಿನಲ್ಲಿದೆ.

ದಕ್ಷಿಣಭಾರತದ ಪಶ್ಚಿಮ ಕರಾವಳಿಯ ಗುಂಟ 160000 ಚದುರ ಕಿ.ಮಿ. ಪ್ರದೇಶದಲ್ಲಿ ಸಹ್ಯಾದ್ರಿ ಪರ್ವತಮಾಲೆ ಹರಡಿದೆ. ಇದರಲ್ಲಿ ಅರಣ್ಯವಿರುವದು ಕೇವಲ ಶೇಕಡಾ 20 ರಷ್ಟು ಪ್ರದೇಶದಲ್ಲಿ ಮಾತ್ರ.

### ಪಶ್ಚಿಮ ಘಟ್ಟದ ಮಹತ್ವ

- ಇವು ದಕ್ಷಿಣ ಭಾರತದ ಜೀವನಾಡಿಯಾದ ಕೃಷ್ಣಾ, ಕಾವೇರಿ, ತುಂಗಭದ್ರಾ ನದಿಗಳ ಉಗಮ ಸ್ಥಾನವಾಗಿದೆ. ಈ ನದಿಗಳ ಜಲಾನಯನ ಪ್ರದೇಶವನ್ನು ಸಂರಕ್ಷಿಸಿದಲ್ಲಿ ಮಾತ್ರ ದಕ್ಷಿಣ ಭಾರತದ ನೀರಿನ ಸುರಕ್ಷತೆಯನ್ನು ಕಾಪಾಡಲು ಸಾಧ್ಯ, ಇದರಿಂದಾಗಿ ಕೃಷಿ, ಮೀನುಗಾರಿಕೆ ಮತ್ತು ತೋಟಗಾರಿಕೆ ಬೆಳೆಗಳ ಇಳುವರಿ ಹೆಚ್ಚುತ್ತದೆ.
- ಜಾಗತಿಕ ಮಟ್ಟದಲ್ಲಿ ಸೂಕ್ಷ್ಮ ಅರಣ್ಯ ಪ್ರದೇಶವೆಂದು ಹೆಸರು ಪಡೆದ ಉಷ್ಣವಲಯದ ಕಾಡು (Tropical Forest) ಇರುವದು ಬ್ರೆಜೀಲ್ ಹಾಗೂ ಭಾರತದಲ್ಲಿ. ಇವುಗಳು ಜಾಗತಿಕ ಮಟ್ಟದಲ್ಲಿ ಆಗುತ್ತಲಿರುವ ಹವಾಮಾನದ ಬದಲಾವಣೆಯನ್ನು ತಡೆಯುವ ಕೆಲಸ ಮಾಡುವದರಿಂದ, ಇವುಗಳು ಜಾಗತಿಕ ಮಹತ್ವ ಪಡೆದಿದೆ. ಇದಲ್ಲದೆ ಭೂ ಸವಕಳಿ ತಡೆದು ನೀರನ್ನು ಇಂಗಿಸುತ್ತದೆ.
- ಇಲ್ಲಿರುವ ಜೀವವಿವಿಧತೆ ಅಪಾರವಾಗಿದ್ದು, ಇಲ್ಲಿರುವ ಸಸ್ಯ ಸಂಪತ್ತು ವಿಶಿಷ್ಟವಾಗಿದೆ. ಆದುದರಿಂದ ಇದನ್ನು Biodiversity Hotspot – ಜೀವವಿವಿಧತೆಯ ಸೂಕ್ಷ್ಮ ತಾಣ ಎಂದು ಗುರುತಿಸಲಾಗಿದೆ. ಉಪಯುಕ್ತ ಔಷಧಿ ಸಸ್ಯಗಳ ತಾಣ ಇದಾಗಿದೆ.
- ಸಹ್ಯಾದ್ರಿಯ ಒಡಲಿನಲ್ಲಿ ಹಲವಾರು ವಿನಾಶಕಾರಿ ( ಗಣಿಗಾರಿಕೆ, ಅರಣ್ಯನಾಶ, ಬೃಹತ್ ಯೋಜನೆಗಳು, ಕಳ್ಳ ಸಾಗಾಣಿಕೆ) ಯೋಜನೆಗಳಿಂದಾಗಿ ಇಲ್ಲಿಯ ಹಸಿರು ನಾಶವಾಗಿ ಬರಡಾಗುತ್ತಲಿದೆ. ಇದರಿಂದ ದಕ್ಷಿಣ ಭಾರತದ ಜನಜೀವನದ ಮೇಲೆ ಗಂಭೀರ ಪರಿಣಾಮ ಉಂಟಾಗಿದೆ. ನೀರಿನ ಬರ ನಿರಂತರವಾಗಿ ಕಾಡುತ್ತಿದೆ.
- ಇವುಗಳನ್ನು ಸಂರಕ್ಷಿಸಲು 'ಸಹ್ಯಾದ್ರಿ ದಿನ'ವನ್ನಾಗಿ ಸೆಪ್ಟೆಂಬರ 8, ರಂದು ಆಚರಿಸಲು ನಿರ್ಧರಿಸಲಾಗಿದೆ.
- ಚಿಪ್ಕೋ ಚಳುವಳಿಯ ನೇತಾರರಾದ ಸುಂದರಲಾಲ ಬಹುಗುಣ ಅವರು 'ಸಹ್ಯಾದ್ರಿ ದಿನ'ವನ್ನು ಆಚರಿಸಿ ಪಶ್ಚಿಮ ಘಟ್ಟದ ಸಂರಕ್ಷಣೆಗಾಗಿ ಕರೆ ನೀಡಲಿದ್ದಾರೆ.
- ಸೆಪ್ಟೆಂಬರ್ 8 ರಂದು ಸಹ್ಯಾದ್ರಿ ದಿನಾಚರಣೆ ಯಾಕೆ? ಇದೇ ದಿನ 1983 ರಲ್ಲಿ, 25 ವರ್ಷಗಳ ಹಿಂದೆ ಅಪ್ಪಿಕೋ ಚಳುವಳಿ ಆರಂಭವಾದ ಶುಭದಿನ ಆದುದರಿಂದ ಇದೇ ದಿನವನ್ನು ಪಶ್ಚಿಮ ಘಟ್ಟದ ದಿನವನ್ನಾಗಿ ಘೋಷಣೆ ಮಾಡಲಾಗುವದು.